# ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

## ಸ್ಪೆಷಲ್ ಕೇಸ್ ನಂಃ 756/2023

| | ಚಾಸಾಃ 1 | ಅಸಾಃ 1 |
|---|---|---|
| ಹೆಸರು | ದಿನೇಶ್ | |
| ತಂದೆಯ ಹೆಸರು : | ಜವರಯ್ಯ | |
| ವಯಸ್ಸು: | 36 ವರ್ಷ | |
| ಕೆಲಸಃ | ಗಾರೆ | |
| ವಾಸಸ್ಥಳ | ಮಂಡಿಕೇರಿ ಗ್ರಾಮ, ಅರಕಲಗೂಡು ತಾ. | |

ದಿನಾಂಕಃ 19/07/2024. ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ಆರೋಪಿತರು ನನಗೆ ಗೊತ್ತು ಅವರನ್ನು ನೋಡಿರುತ್ತೇನೆ. ಅವರು ಬಿ.ಕಾಟೀಹಳ್ಳಿ ಗ್ರಾಮದವರು. 4 ನೇ ಆರೋಪಿ ನಮ್ಮ ಜನಾಂಗದವರು, ಉಳಿದ ಆರೋಪಿತರು ಒಕ್ಕಲಿಗ ಜಾತಿಗೆ ಸೇರಿದವರಿರುತ್ತಾರೆ. ನಾನು ಆದಿ ಕರ್ನಾಟಕ ಪರಿಶಿಷ್ಟ ಜಾತಿಯ ಸದಸ್ಯನಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಸಹಿ ಮಾಡಲು ಕಲಿತಿರುತ್ತೇನೆ.

ನನ್ನ ತಂದೆಗೆ ಇಬ್ಬರು ಹೆಂಡತಿಯರು, ನಾನು 2 ನೇ ಹೆಂಡತಿಯ ಮಗ, ನನ್ನ ತಂದೆಯ 2 ನೇ ಹೆಂಡತಿಗೆ 4 ಜನ ಮಕ್ಕಳು ಇರುತ್ತೇವೆ. ಮೃತ ಕಾಂತರಾಜು ನಮ್ಮ ತಂದೆಯ 3 ನೇ ಮಗ ಅವರು ಸುಮಾರು 2-3 ವರ್ಷದಿಂದ ಬಿ ಕಾಟೀಹಳ್ಳಿಯ ಅನ್ನಪೂರ್ಣೇಶ್ವರಿ ಹೊಟೇಲ್ ನಲ್ಲಿ ಕೆಲಸ ಮಾಡುತ್ತಿದ್ದರು. ನಾನು ನನ್ನ ತಾಯಿ ಹಾಗೂ ನನ್ನ ಹೆಂಡತಿ ಮಂಡಿಕೇರಿಯಲ್ಲಿ ವಾಸ ಮಾಡುತ್ತಿದ್ದೇವೆ. ಕಾಂತರಾಜು ನನ್ನ ಮನೆಗೆ ಆಗಾಗ ಬಂದು ಹೋಗುತ್ತಿದ್ದರು. ದಿ. 17.10.2023 ರಂದು ಕಾಂತರಾಜು ಕೊಲೆಯಾಗಿ ತೀರಿಕೊಂಡಿರುತ್ತಾರೆ. ಆ ಸಮಯದಲ್ಲಿ ನಾನು ಊರಿನಲ್ಲಿದ್ದೆ.

3. ನನಗೆ 18 ನೇ ತಾರೀಖಿನಂದು ಬೆಳಿಗ್ಗೆ ಸುಮಾರು 8.00 ಗಂಟೆಗೆ ಕೊಲೆಯಾದ ವಿಚಾರ ಗೊತ್ತಾಗಿರುತ್ತದೆ. ಹಾಸನ ಬಡಾವಣೆ ಪೊಲೀಸ್ ಠಾಣೆಯವರು ನಮಗೆ ವಿಚಾರ ತಿಳಿಸಿರುತ್ತಾರೆ. ನಾನು ನನ್ನ ತಮ್ಮನಿಗೆ ತಿಳಿಸಿ, ಬಿ.ಕಾಟೀಹಳ್ಳಿಗೆ ಹೋಗಿರುತ್ತೇನೆ. ಆಗ ಸಮಯ ಸುಮಾರು 10-11 ಗಂಟೆಯಾಗಿರುತ್ತದೆ. ಬಿ,ಕಾಟೀಹಳ್ಳಿಯ ಆಟೋ ಮೊಬೈಲ್ ಸರ್ಕಲ್ ಹತ್ತಿರ ಹೋಗಿರುತ್ತೇನೆ. ಅಲ್ಲಿ ಸುಮಾರು ಅರ್ಧ ಗಂಟೆ ಇದ್ದೆ. ಅಲ್ಲಿ ಸ್ಥಳದಲ್ಲಿ ರಕ್ತದ ಕಲೆ ಇದ್ದು, ಶವ ಏನಾಯಿತು ಎಂದು ಅಲ್ಲಿ ಕೇಳಿದಾಗ, ಪೊಲೀಸರು ಈಗ ತಾನೆ ಶವಾಗಾರಕ್ಕೆ ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿದರು.

4. ಪಕ್ಕದಲ್ಲಿದ್ದ ಪೇಯಿಂಟ್ ಅಂಗಡಿಯವರನ್ನು ವಿಚಾರಣೆ ಮಾಡಿದಾಗ ಅವರು, ರಾತ್ರಿ ಸುಮಾರು 11 ಗಂಟೆ ಸಮಯದಲ್ಲಿ ಕೂಗಾಡುವ ಶಬ್ದ ಕೇಳಿ ಬಂದು ನೋಡಿದಾಗ, ಕಾಂತರಾಜುರವರಿಗೆ ಆರೋಪಿಗಳು, ದೊಣ್ಣೆಯಿಂದ, ಇಟ್ಟಿಗೆಯಿಂದ ಹೊಡೆಯುತ್ತಿದ್ದರು, ನಾನು ಹೋಗಿ ಅವರನ್ನು ಬಿಡಿಸಿ ಒಳಗೆ ಹೋದೆ ಎಂದು ತಿಳಿಸಿದರು. ಬೆಳಿಗ್ಗೆ ನೋಡಿದಾಗ, ಶವ ಅಲ್ಲಿತ್ತು, ಶವವನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ, ಅಲ್ಲಿ ಹೋಗಿ ನೋಡಿ ಎಂದು ತಿಳಿಸಿದರು. ನಂತರ ನಾವು ಹಾಸನ ಸರ್ಕಾರಿ ಆಸ್ಪತ್ರೆಗೆ ಹೋದೆವು. ಹಾಸನ ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಕಾಂತರಾಜು ರವರ ಶವ ಇತ್ತು. ನಾನು ಅದನ್ನು ನೋಡಿರುತ್ತೇನೆ. ಆತನ ಮುಖ, ತಲೆ ಮತ್ತು ಮೈಗೆಲ್ಲಾ ಏಟಾಗಿರುತ್ತದೆ. ತಲೆಯಲ್ಲಿ ರಕ್ತ ಸುರಿಯುತ್ತಿತ್ತು.

5. ನಾನು ಹಾಸನ ಬಡಾವಣೆ ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರಿನಲ್ಲಿರುವ ವಿಚಾರವನ್ನು ನಾನು ಹೇಳಿ ಬರೆಸಿರುತ್ತೇನೆ.

6. ಮೃತ ಕಾಂತರಾಜು ರವರು ಆಗಾಗ ನಮ್ಮ ಮನೆಗೆ ಬಂದಾಗ ನನ್ನ ತಾಯಿಯೊಂದಿಗೆ, ಆರೋಪಿಗಳು ತನ್ನ ಸಂಬಳ ಕೇಳುತ್ತಾರೆ, ಅವರು ಹೊಡೆಯುವುದು, ಬಡಿಯುವುದು ಮಾಡುತ್ತಾರೆ, ಈ ತಿಂಗಳು ಸಂಬಳ

ತೆಗೆದುಕೊಂಡು ನಾನು ಬರುತ್ತೀನಿ ಎಂದು ಹೇಳಿರುತ್ತಾರೆ. ಈ ವಿಚಾರವನ್ನು ನಾನು ದೂರಿನಲ್ಲಿ ಹೇಳಿರುತ್ತೇನೆ.

7. ಮರಣೋತ್ತರ ಪರೀಕ್ಷೆಯಾದ ನಂತರ 19 ನೇ ತಾರೀಖು ಶವವನ್ನು ನಮ್ಮ ಊರಿಗೆ ತಂದು ಶವಸಂಸ್ಕಾರ ಮಾಡಿರುತ್ತೇವೆ. 20 ನೇ ತಾರೀಖು ಹಾಸನ ಬಡಾವಣೆ ಪೊಲೀಸ್ ಠಾಣೆಗೆ ಕರೆಸಿ, ವಿಚಾರಣೆ ಮಾಡಿರುತ್ತಾರೆ. ಪೊಲೀಸರು ನನಗೆ ಆರೋಪಿಗಳನ್ನು ತೋರಿಸಿರುತ್ತಾರೆ. ನಾನು ಠಾಣೆಯಲ್ಲಿ ಆರೋಪಿತರನ್ನು ಗುರುತಿಸಿರುತ್ತೇನೆ. ನಾನು ಈ ಬಗ್ಗೆ ಮರು ಹೇಳಿಕೆ ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

8. ಮೃತ ಕಾಂತರಾಜು ರವರು ಕೆಲಸ ಮಾಡುತ್ತಿದ್ದ ಹೊಟೇಲ್ ನಲ್ಲಿ ಭಾಗ್ಯಮ್ಮ ರವರು ಪಾತ್ರೆ ತೊಳೆಯುತ್ತಿದ್ದರು, ಕಾಂತರಾಜು ಅವರ ಜೊತೆ ಸಲಿಗೆಯಿಂದ ಇದ್ದುದ್ದನ್ನು ಆರೋಪಿತರಿಗೆ ಇದನ್ನು ನೋಡಿ ಸಹಿಸಲಾಗದೇ, ಆರೋಪಿಗಳು ಕಾಂತರಾಜು ಜೊತೆ ಜಗಳ ಮಾಡಿ ಹೊಡೆದಿರುತ್ತಾರೆ. ಆರೋಪಿತರೇ ಮೃತ ಕಾಂತರಾಜುರವರ ಸಾವಿಗೆ ಕಾರಣರಿರುತ್ತಾರೆ. ಮೃತ ಕಾಂತರಾಜುವಿನ ಶವವನ್ನು ಸಾಕ್ಷಿ ಪೊಟೋದಲ್ಲಿ ನೋಡಿ ಗುರುತಿಸಿದ್ದು ಸದರಿ 4 ಪೊಟೋಗಳನ್ನು ನಿಪಿ-2 ರಿಂದ 5 ಎಂದು ಸಿಡಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

**ಪಾಟೀಸವಾಲುಃ ಎಸ್‌ಪಿಪಿ ರವರಿಂದಃ**

9. ಮೃತ ಕಾಂತರಾಜು ನನ್ನ ತಾಯಿಗೆ, ಆರೋಪಿಗಳು ಭಾಗ್ಯ ಎಂಬುವವರ ವಿಚಾರ ತೆಗೆದು, ಹೊಲೆಯ ನನ್ನ ಮಗನೇ ಎಂದು ಆಗಾಗ ಹೊಡೆಯುವುದು ಬಡಿಯುವುದು ಮಾಡುತ್ತಿದ್ದರು ಎಂದು ಹೇಳಿರುತ್ತಾರೆ ಎಂದು ದೂರಿನಲ್ಲಿ ನಾನು ಹೇಳಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ  ಹೆಚ್ ಎಸ್ ಎಂ ಆರ್ ವಕೀಲರಿಂದಃ

10. ನನ್ನ ಅಣ್ಣನಿಗೆ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸಾಕ್ಷಿ ಸ್ವಲ್ಪ ಸ್ವಲ್ಪ ಇತ್ತು ಎಂದು ನುಡಿಯುತ್ತಾರೆ. ಕಾಂತರಾಜು ರವರಿಗೆ ಮದ್ಯಪಾನ ಮಾಡುವ ಅಭ್ಯಾಸದಿಂದ ಅವರ ಇಬ್ಬರು ಹೆಂಡತಿಯರು ಬಿಟ್ಟು ಹೋಗಿದ್ದಾರೆ ಎಂದರೆ ಸರಿ. ಸುಮಾರು 10 ವರ್ಷದಿಂದ ಮನೆ ಬಿಟ್ಟು ಬೇರೆ ಕರೆ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿಂದು 2-3 ವರ್ಷದಿಂದ ಎಂದು ನುಡಿಯುತ್ತಾರೆ. ಕಾಂತರಾಜು ರವರು ಹೊಟೇಲ್ ನಲ್ಲಿ ಕೆಲಸ ಮಾಡಿಕೊಂಡು ಅಲ್ಲೆ ಉಳಿಯುತ್ತಿದ್ದರು ಎಂದರೆ ಸರಿ. ಕಾಂತರಾಜು ರವರಿಗೆ ಊರಿನಲ್ಲಿ ಪ್ರತ್ಯೇಕ ಮನೆ ಇರುವುದಿಲ್ಲ, ಎಲ್ಲರೂ ಒಟ್ಟಿಗೆ ಇದ್ದೆವು.

11. ಕಾಂತರಾಜುರವರಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಕಾಂತರಾಜು ಹತ್ತಿರ ಮೊಬೈಲ್ ಇತ್ತು, ಕೊಲೆಯಾದ ನಂತರ ಮೊಬೈಲ್ ಏನಾಯಿತು ಗೊತ್ತಿಲ್ಲ, ಕಾಂತರಾಜು ರವರ ಮೊಬೈಲ್ ನಂಬರ್ ಗೊತ್ತಿಲ್ಲ. ಕಾಂತರಾಜು ರವರ ಹೆಂಡತಿಯರು ಬಿಟ್ಟು ಸುಮಾರು 12 ವರ್ಷವಾಗಿರುತ್ತದೆ. ಅವರಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ, ಅವರು ಎಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಕಾಂತರಾಜು ರವರಿಗೆ ದುಷ್ಚಟಗಳಿತ್ತು ಎಂದರೆ ಸರಿಯಲ್ಲ. ಸಂದೀಪರವರು ಸ್ಥಳಕ್ಕೆ ಹೋದಾಗ, ಈ ವಿಷಯವನ್ನು ತಿಳಿಸಿರುತ್ತಾರೆ. ದೂರಿನಲ್ಲಿ ಸಂದೀಪ ರವರು ತಿಳಿಸಿರುವ ಬಗ್ಗೆ ಬರೆಸಲು ತೊಂದರೆ ಇರಲಿಲ್ಲ. ಆರೋಪಿಗಳನ್ನು ಇದೇ ಮೊದಲನೇ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ನೋಡಿರುತ್ತೇನೆ. ಘಟನೆ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ, ಯಾರೋ ನನಗೆ ವಿಚಾರ ತಿಳಿಸಿಲ್ಲ, ಪೊಲೀಸರ ಮಾತು ಕೇಳಿ ದೂರು ಕೊಟ್ಟು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

12. ಮೃತ ಕಾಂತರಾಜು ರವರು ಮನೆಗ ಬಂದಾಗ, ಆರೋಪಿಗಳು ಅವನಿಗೆ ಬೈಯುತ್ತಿದ್ದರು ಎಂದು ಹೇಳಿದ ಬಗ್ಗೆ ದೂರು ಕೊಡಲು ಅವರಿಗೆ ತೊಂದರೆ ಇತ್ತು. ಮತ್ತೆ ಸಾಕ್ಷಿ ಏನು ತೊಂದರೆ ಇರಲಿಲ್ಲ ಎಂದು

ನುಡಿಯುತ್ತಾರೆ. ನಾನು ಹೋಗುವ ಮುಂಚೆನೆ ಡಿ.ಎಸ್.ಎಸ್ ಸಂಘದವರು ಸ್ಥಳದಲ್ಲಿದ್ದರು. ನನಗೆ ಡಿ.ಎಸ್.ಎಸ್ ಸಂಘದ ಅಧ್ಯಕ್ಷರ ಪರಿಚಯವಿದೆ ಎಂದರೆ ಸರಿಯಲ್ಲ. ನಮ್ಮ ಊರಿನಿಂದ ಹಾಸನ 30 ಕಿ.ಮೀ ದೂರವಿದೆ. ವಿಚಾರವನ್ನು ಸಂಬಂಧಿಕರಿಗೆ ಹೇಳಿ ಸ್ಥಳಕ್ಕೆ ಹೋಗಲು ತಡವಾಗಿರುತ್ತದೆ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ, ನೇರವಾಗಿ ಶವಗಾರಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಕಾಂತರಾಜುವಿಗೂ ಯಾವುದೇ ಸಂಬಂಧವಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಎಂ ಎನ್ ಜೆ ವಕೀಲರಿಂದಃ</u>

13. ಕಾಂತರಾಜು ರವರು ಕೆಲಸ ಮಾಡುವ ಕಡೆಯಲ್ಲೇ, ಆರೋಪಿಗಳು ಕೆಲಸ ಮಾಡುತ್ತಿದ್ದರು. ಈ ವಿಚಾರವನ್ನು ದೂರಿನಲ್ಲಿ ಹೇಳಿರುತ್ತೇನೆ. ಆರೋಪಿಗಳು ಮತ್ತು ಕಾಂತರಾಜು ರವರು ಕೆಲಸ ಮಾಡುತ್ತಿದ್ದ ವಿಚಾರವನ್ನು ಪೊಲೀಸರಿಗೆ ದಾಖಲಾತಿಗಳನ್ನು ಒದಗಿಸಿರುತ್ತೇನೆ. ಪೆಂಟ್ ಅಂಗಡಿಯವರು ಕೃತ್ಯ ನಡೆದ ಬಗ್ಗೆ ನನಗೆ ಹೇಳಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದೂರು ಬರೆದು ಕೊಟ್ಟ ಡಿ ಎಸ್ ಎಸ್ ಸಂಘದ ನಾಯಕರು ಇವತ್ತು ನ್ಯಾಯಾಲಯದಲ್ಲಿ ಹಾಜರಿದ್ದಾರೆ ಎಂದರೆ ಸರಿ. ಅವರು ನನಗೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿ.

14. ನನ್ನ ಅಣ್ಣ ಕಾಂತರಾಜು ರವರು ಅತಿಯಾಗಿ ಮದ್ಯಪಾನ ಮಾಡಿ ಬಿದ್ದು ಅಥವಾ ಅಪಘಾತದಲ್ಲಿ ಸತ್ತಿರುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಆರೋಪಿಗೂ ಈ ಕೇಸಿಗೂ ಯಾವುದೇ ಸಂಬಂಧವಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎಂ ಜೆ ಪಿ ವಕೀಲರಿಂದಃ

15. ತೇಜೂರು ಮಂಜುರವರ ಕೈಯಿಂದ ದೂರನ್ನು ಬರೆಸಿರುತ್ತೇನೆ. ಅವರು ಡಿ ಎಸ್ ಎಸ್ ಸಂಘಟನೆಯ ಕಾರ್ಯಕರ್ತರು. ಅವರು ಇದೇ ತರಹ ಸಂಘಟನೆ ಮಾಡಿಕೊಂಡು ಸುಮಾರು ದೂರನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರ ದೂರಿನಲ್ಲಿ ಬರೆದಿರುವ ವಿಚಾರ ನಿಖರವಾಗಿ ಮಾಹಿತಿ ಇಲ್ಲ ಎಂದರೆ ಸರಿ. ಡಿವೈಎಸ್‌ಪಿ ರವರು ನನಗೆ ಫೋನ್ ಮಾಡಿ ತಿಳಿಸಿರುತ್ತಾರೆ. ಈ ವಿಚಾರವನ್ನು ನಾನು ದೂರಿನಲ್ಲಿ ಬರೆಸಿರುವುದಿಲ್ಲ. ಪೊಲೀಸರ ಒತ್ತಾಯದ ಮೇರೆಗೆ ಈ ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

16. ಈ ತರಹ ಕೇಸಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಹಾರ ಕೊಡುತ್ತಾರೆ ಎಂದರೆ ಸರಿ. ಸುಮಾರು 8.5 ಲಕ್ಷ ಪರಿಹಾರ ಪಡೆದಿರುತ್ತೇವೆ. ಪರಿಹಾರ ಪಡೆಯಲು ಸಹಕಾರ ಕೊಡುತ್ತಿರುವವರು ಡಿ.ಎಸ್.ಎಸ್ ಸಂಘದವರು ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧವಾಗಿ ಸಾಕ್ಷಿ ಹೇಳಿದ್ದಾರೆ, ಉಳಿದ ಹಣ ಕೊಡುತ್ತಾರೆ ಎಂದು ಸಮಾಜ ಕಲ್ಯಾಣ ಇಲಾಖೆಯವರು ಕೊಡುತ್ತೇವೆ ಎಂದರೆ ಸರಿಯಲ್ಲ. ಹೆಚ್ಚುವರಿ ಹಣ ಪಡೆಯುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಕಿ ಹಣ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

17. ನಿಪಿ-2 ರಿಂದ 6 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಘಟನೆ ಸ್ಥಳಕ್ಕೆ ಹೋದಾಗ, ಸ್ಥಳದಲ್ಲಿ ಬೇರೆ ಯಾರು ಇರಲಿಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಪೊಲೀಸರು ಹೇಳಿ ಕೊಟ್ಟ ಹಾಗೆ ಸ್ಥಳಕ್ಕೆ ಹೋಗಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗೂ 4 ನೇ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ವೈ ಎನ್ ಪಿ ವಕೀಲರಿಂದಃ

ಮೇಲಿನ ಆರೋಪಿತರ ಪರ ಪಾಟೀ ಸವಾಲನ್ನು ಅಳವಡಿಸಲಾಗಿದೆ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ